ನನ್ನ ಭವಿಷ್ಯ ನನ್ನ ಕ್ಷೌರಕತ್ತಿಯ ಅಲಗಿನ ಮೇಲೆ ನಿಂತಿದೆ. ನನ್ನ ಬಲಗೈಯಿಂದ ಅವನ ಕತ್ತಿನ ಮೇಲೆ ಕೊಂಚ, ಆದರೆ ಸ್ಥಿರವಾದ ಒತ್ತಡ ಹಾಕಿ ಕತ್ತಿ ಅವನ ಕತ್ತಿನೊಳಗೆ ಇಳಿಯುವಂತಾದರೆ ಸಾಕು. ಮನುಷ್ಯನ ಚರ್ಮದಷ್ಟು ಮೃದುವಾದ ವಸ್ತು ಬೇರೊಂದಿಲ್ಲ. ಅದರೊಂದಿಗೆ ರಕ್ತವೂ ಕಮ್ಮಿ ಇಲ್ಲ. ನನ್ನ ಕ್ಷೌರಕತ್ತಿಯಷ್ಟು, ನನ್ನ ನೆಚ್ಚಿನ ಕ್ಷೌರಕತ್ತಿಯಷ್ಟು ಹರಿತವಾದದ್ದು ಮತ್ತೊಂದಿಲ್ಲ. ಆದರೂ, ನಾನೊಬ್ಬ ಕೊಲೆಗಾರ ಎನಿಸಿಕೊಳ್ಳುವುದು ನನಗೆ ಬೇಕಿಲ್ಲ. ಇಲ್ಲ ಕ್ಯಾಪ್ಟನ್. ನೀವು ಮುಖ ಕ್ಷೌರಕ್ಕೆಂದು ನನ್ನನ್ನು ಹುಡುಕಿ ಬಂದಿರಿ. ನನ್ನ ವೃತ್ತಿ ಧರ್ಮವನ್ನು ಪ್ರಾಮಾಣಿಕವಾಗಿ ಪಾಲಿಸುತ್ತೇನೆ. ನನ್ನ ಕೈಗಳನ್ನು ಇನ್ನೊಬ್ಬನ ರಕ್ತದಿಂದ ಮಲಿನಗೊಳಿಸಿಕೊಳ್ಳಲು ಖಂಡಿತ ಅವಕಾಶ ಕೊಡುವುದಿಲ್ಲ. ಬರೀ ಸಾಬೂನಿನ ನೊರೆಯಷ್ಟೇ. ಮತ್ತೇನಿಲ್ಲ. ನೀನೋ, ದಂಡಾಧಿಕಾರಿ. ನಾನು, ಯಃಕಶ್ಚಿತ್ ಕ್ಷೌರಿಕ. ನಿನ್ನದೊಂದು ವೃತ್ತಿ. ನನ್ನದೊಂದು ವೃತ್ತಿ.

ಕ್ಷೌರದ ನಂತರ ಕ್ಯಾಪ್ಟನನ ಮುಖ ಮೃದುವಾಗಿ ಹೊಳೆಯುತ್ತಿತ್ತು. ಅವನು ಎದ್ದು ಕನ್ನಡಿಯಲ್ಲಿ ತನ್ನ ಮುಖವನ್ನು ವಿವಿಧ ಭಂಗಿಯಲ್ಲಿ ತಿರುಗಿಸಿ ನೋಡಿದ. ಮೃದುವಾಗಿ ಮೆಲ್ಲಗೆ ಕೈಯಾಡಿಸಿದ. ಅವನಿಗೆ ತೃಪ್ತಿಯಾದಂತೆನಿಸಿತು.

"ಥ್ಯಾಂಕ್ಸ್ ಕಣಯ್ಯ!" ಎನ್ನುತ್ತಾ ಕ್ಯಾಪ್ಟನ್ ಟೋರೇಸ್ ತನ್ನ ಟೊಪ್ಪಿಗೆ, ಕಾಡತೂಸಿನ ಪಟ್ಟಿಯನ್ನು ಎತ್ತುತ್ತಾ ಹೇಳಿದ. ನನ್ನ ಮುಖ ಬಹುಶಃ ಪೇಲವವಾಗಿತ್ತೇನೋ? ನಾನು ಬೆವರಿನಿಂದ ಸಂಪೂರ್ಣವಾಗಿ ತೊಯ್ದು ಹೋಗಿದ್ದೆ.

ಅವನು ತನ್ನ ಸಮವಸ್ತ್ರವನ್ನು ಸರಿಪಡಿಸಿ, ಬೆಲ್ಟನ್ನು ಕಟ್ಟಿ, ಕೂದಲನ್ನು ಒಪ್ಪವಾಗಿಸಿ ಟೊಪ್ಪಿಗೆಯನ್ನು ಸರಿಯಾಗಿ ಧರಿಸಿದ. ಪ್ಯಾಂಟಿನಿಂದ ಕೆಲವು ನಾಣ್ಯಗಳನ್ನು ಹೊರತೆಗೆದು ನನ್ನ ಮಜೂರಿಯನ್ನು ಪಾವತಿಸಿ ಬಾಗಿಲೆಡೆಗೆ ಹೆಜ್ಜೆ ಹಾಕತೊಡಗಿದ. ಬಾಗಿಲು ತೆರೆಯುವ ಮುನ್ನ ಒಮ್ಮೆ ಹಿಂದೆ ನೋಡಿ ನನ್ನನ್ನು ಉದ್ದೇಶಿಸುತ್ತಾ, "ಎಲ್ಲರೂ, ನೀನು ನನ್ನನ್ನು ಕೊಲ್ಲತ್ತೀಯಾ ಎಂದೇ ಹೇಳಿದರು! ಇದನ್ನು ಪರೀಕ್ಷಿಸಲೆಂದೇ ನಾನು ಬಂದಿದ್ದೆ. ಹ್ಹ... ಹ್ಹ... ಹ್ಹ... ಆದರೆ ಕೊಲ್ಲುವುದು ಅಷ್ಟು ಸಲೀಸಲ್ಲ ಕಣಯ್ಯ! ನನಗದು ಚೆನ್ನಾಗಿ ಗೊತ್ತು!" ಎನ್ನುತ್ತಾ, ಬಾಗಿಲು ತೆರೆದು ಹೊರನಡೆದ.

### ಹೆರ್ನಾಂಡೊ ಟೆಲೆಜ್

ಕೊಲಂಬಿಯಾದ ಲೇಖಕ ಹೆರ್ನಾಂಡೊ ಟೆಲೆಜ್ (1908–1966) ಮೂಲತಃ ಪತ್ರಕರ್ತ. 1950ರ ನಂತರವಷ್ಟೇ ಕತೆಗಳನ್ನು ಬರೆಯಲು ಶುರುಮಾಡಿದ. ಕೊಲಂಬಿಯಾದ ಪ್ರತಿಷ್ಠಿತ ಪತ್ರಿಕೆ, ನಿಯತಕಾಲಿಕಗಳಲ್ಲಿ ಕೆಲಸ ಮಾಡಿದ ಹೆರ್ನಾಂಡೊನ 'Ashes in the Wind' ಕಥಾಸಂಗ್ರಹ ಅಪಾರ ಜನಮನ್ನಣೆ ಗಳಿಸಿತು. ಟೆಲೆಜ ತನ್ನ ಜೀವಮಾನದಲ್ಲಿ ಕೊಲಂಬಿಯಾ ದೇಶ ಕಂಡ ಸರ್ವಾಧಿಕಾರದ ವಿವಿಧ ರೂಪಗಳನ್ನು ಕತೆಗಳಲ್ಲಿ ಚಿತ್ರಿಸಿದ್ದಾರೆ. ಪ್ರಸ್ತುತ ಕತೆ 'Lather and Nothing Else' ಕತೆಯ ಅನುವಾದ. ಇದರ ಕಿರುಚಿತ್ರವನ್ನು ಯುಟ್ಯೂಬಿನಲ್ಲೂ ನೋಡಬಹುದು.

### ಜೆ.ವಿ. ಕಾರ್ಲೊ

ಪ್ರಸ್ತುತ ಹಾಸನದಲ್ಲಿ ನೆಲೆಸಿದ್ದಾರೆ. ಸಣ್ಣಕತೆಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸುತ್ತ ಬಂದಿದ್ದಾರೆ. ಸುಮಾರು 35 ಸಣ್ಣಕತೆಗಳು ಪತ್ರಿಕೆ, ಅಂತರ್ಜಾಲಗಳಲ್ಲಿ ಪ್ರಕಟಗೊಂಡಿವೆ. ಕನ್ನಡ ಮಾತ್ರವಲ್ಲದೆ ಕೊಂಕಣಿ ಭಾಷೆಯಲ್ಲಿ ಅವರ 80ಕ್ಕೂ ಹೆಚ್ಚು ಸಣ್ಣಕತೆಗಳ ಅನುವಾದಗಳು ಹಾಗೂ ಮೂರು ಕಾದಂಬರಿಗಳು ಧಾರಾವಾಹಿಯಾಗಿ ಪ್ರಕಟವಾಗಿವೆ.